ಬಾಲ್ಕಿ ಪಟ್ಟಣದಲ್ಲಿರುವ 100 ಹಾಸಿಗೆಗಳ ಆಸ್ಪತ್ರೆ ಕಟ್ಟಡ

746(1086) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ):ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಲ್ಕಿ ಪಟ್ಟಣದಲ್ಲಿ 100 ಹಾಸಿಗೆಯ ಆಸ್ಪತ್ರೆಯ ಕಟ್ಟಡದ ಕೆಲಸ ಎಂದಿನಿಂದ ಪ್ರಾರಂಭವಾಗುತ್ತದೆ ಮತ್ತು ಎಂದು ಪೂರ್ಣಗೊಳಿಸಲಾಗುವುದು;

ಆ) ಪ್ರಾಥಮಿಕ ಆರೋಗ್ಯ ಘಟಕದಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ, ಬಾಲ್ಕಿ ತಾಲ್ಲೂಕಿನ ಯಾವ ಯಾವ ಪಿ.ಹೆಚ್.ಯು. ಇಂದ ಪಿ.ಹೆಚ್.ಸಿ. ಗೆ ಮೇಲ್ದರ್ಜೆಗೇರಿಸಲಾಗುತ್ತದೆ; ಪೂರ್ಣ ವಿವರಗಳನ್ನು ಒದಗಿಸುವುದು?

ಡಾ॥ಎ.ಬಿ.ಮಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಾಲ್ಕಿಯಲ್ಲಿಹಾಲಿ ಇರುವ 30 ಹಾಸಿಗೆಗಳ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ ತಯಾರಿಸಿರುವ ನಕ್ಷೆ ಹಾಗೂ ಅಂದಾಜುಗಳನ್ನು ಜರ್ಮನಿಯ ಕೆ ಎಫ್ ಡಬ್ಲ್ಯೂ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ದಿನಾಂಕ: 24-2-2001 ರಂದು ಕಳುಹಿಸಿದೆ. ಅನುಮೋದನೆ ದೊರೆತ ನಂತರ ಗುತ್ತಿಗೆ ಕರೆದು ಕಾಮಗಾರಿಯನ್ನು ಗುತ್ತಿಗೆ ನೀಡಿದ ದಿನಾಂಕದಿಂದ 18 ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣಾ ವೆಚ್ಚ

747 (1089) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೀದರ್ ಜಿಲ್ಲಾ ಪಂಚಾಯತ್‌ಗೆ ಒಳಪಡುವ ರಸ್ತೆಗಳಿಗೆ ನಿರ್ವಹಣಾ ವೆಚ್ಚ(ಮೆಂಟೀನೆನ್ಸ್ ಬಜೆಟ್) ಇದೆಯೆ?

2) ಇದ್ದಲ್ಲಿ ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ಯಾವ ಯಾವ ರಸ್ತೆಗಳಿಗೆ ಎಷ್ಟು ಖರ್ಚಾಗಿದೆ? (ರಸ್ತೆವಾರು ವಿವರ ನೀಡುವುದು)

3) ಭಾಲ್ಕಿ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ಜಿಲ್ಲಾ ಪಂಚಾಯತ್‌ನ ಎಷ್ಟು ರಸ್ತೆಗಳಲ್ಲಿ ಗುಂಡಿ ಬಿದ್ದು ಹಾಳಾಗಿದೆ 4) ಈ ರಸ್ತೆಗಳಲ್ಲಿ ಬಿದ್ದ ಗುಂಡಿಗಳನ್ನು ಮುಚ್ಚಲು ಸರ್ಕಾರ ಕೈಗೊಳ್ಳುವ ಕ್ರಮವೇನು? ಹಾಗೂ ಇವುಗಳ ದುರಸ್ಥಿಗಾಗಿ ಎಷ್ಟು ದಿವಸಗಳು ಬೇಕಾಗುತ್ತದೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1) ಇದೆ. 2000-01 ನೇ ಸಾಲಿಗೆ ರೂ. 121.31 ಲಕ್ಷ ನಿರ್ವಹಣೆ ವೆಚ್ಚ (ಮೆಂಟೆನೆನ್ಸ್ ಬಜೆಟ್) ಇರುತ್ತದೆ.

2) ಭಾಲ್ಕಿ ತಾಲ್ಲೂಕಿಗೆ ವಿವಿಧ ರಸ್ತೆಗಳಿಗೆ ರೂ. 10.05,330 ಖರ್ಚಾಗಿದುದ ರಸ್ತೆಗಳ ವಿವರಗಳನ್ನು ಅನುಬಂಧ- 1 ರಲ್ಲಿ ಲಗತ್ತಿಸಲಾಗಿದೆ.

3) ಭಾಲ್ಕಿ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ಜಿಲ್ಲಾ ಪಂಚಾಯತಿಯ 55 ರಸ್ತೆಗಳಲ್ಲಿ 89.50 ಕಿ.ಮೀ. ರಸೆ ಗುಂಡಿ ಇದ್ದು ಹಾಳಾಗಿರುತ್ತದೆ. ಇದಲ್ಲದೆ 18 ಅಡ್ಡಮೋರಿಗಳು ಹಾಳಾಗಿರುತ್ತದೆ.

4) ರೂ. 25.00 ಲಕ್ಷ ಅನುದಾನ ರಸ್ತೆ ಕಾಮಗಾರಿಗಳ ದುರಸ್ತಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ ಕೊಡಲಾಗಿದೆ.

ಅನುಬಂಧ - 1

ವಿಧಾನಸಭಾ ಸದಸ್ಯರಾದ ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸ.ಂಖ್ಯೆ 1089 ಕ್ಕೆ ಉತ್ತರಗಳು

ಭಾಲ್ಕಿ ತಾಲ್ಲೂಕಿನ ರಸ್ತೆವಾರು ವಿವರಗಳು

ಕ್ರಮ ಸಂಖ್ಯೆ.	ರಸ್ತೆಯವಿವರ	ಮೊತ್ತ
1	2	3
1)	ಕೇರೂರ ದಿಂದ ಯುಪಲಾ ರಸ್ತೆ ಸುಧಾರಣೆ ಮತ್ತು ಸಿ. ಡಿ	73,637-00
2)	ಕಪಲಾಪುರ ಕೂಡು ರಸ್ತೆ ಸುಧಾರಣೆ ಮತ್ತು ಸಿ. ಡಿ	14,780-00
3)	ಇಂಚೂರದಿಂದ ಲಾಧಾ ರಸ್ತೆ ಸುಧಾರಣೆ ಮತ್ತು ಸಿ. ಡಿ	65,121-00
4)	ಹಜನಾಳ ದಿಂದ ಚೋರನಾಳ ರಸ್ತೆ ಸುಧಾರಣೆ ಮತ್ತು ಸಿ. ಡಿ	20,477-00
5)	ನಿಟ್ಟೂರ (ಬಿ) ದಿಂದ ಹಜನಾಳ ರಸ್ತೆ ಸುಧಾರಣೆ ಮತ್ತು ಸಿ. ಡಿ	36,269-00
6)	ಲಾಧಾ ದಿಂದ ಕಟಿಗಾಂವ ರಸ್ತೆ ಸುಧಾರಣೆ ಮತ್ತು ಸಿ. ಡಿ	30,568-00
7)	ಬಾಳೂರ ದಿಂದ ಗೋರವಾಳ ರಸ್ತೆ ಸುಧಾರಣೆ ಮತ್ತು ಸಿ. ಡಿ.	17,136-00
8)	ಕೊಟನ್ಯಾಳ ದಿಂದ ಗೋರನಾಳ .....ಅದೇ.....	14,510-00
9)	ಹಲಬರ್ಗಾ ಹರಿಜನ ಕಲೋನಿಯಲ್ಲಿ ರಸ್ತೆ ಸುಧಾರಣೆ	51,423-00

10)	ಕಲವಾಡಿ ಚಿಕಲಚಂದಾ ರಸ್ತೆ ಸುಧಾರಣೆ ಮತ್ತು ಸಿ. ಡಿ		40,548-00
11)	ಚಲಬರ್ಗಾ ದಿಂದ ತರಸಳ್ಳಿ	---ಅದೇ-----	19,457-00
12)	ಕೋಸಮ ದಿಂದ ಅಳೆಯಾಚಾಡ	---ಅದೇ-----	21,850-00
13)	ಧನ್ನುರಾ ದಿಂದ ರುದನೂರ	---ಅದೇ-----	17,172-00
14)	ಅಹಮದಾಚಾರ ದಿಂದ ಮೇಳಕು ುದಾ	---ಅದೇ-----	15,547-00
15)	ಕೇಸರ ಜವಳಗಾ ದಿಂದ ಅಳವಾಯಿ	---ಅದೇ-----	60,283-00
16)	ಅಳವಾಯಿ ದಿಂದ ಡೋಣಗಾಪೂ ಗ	---ಅದೇ-----	50,279-00
17)	ಮಾಸೂರ ದಿಂದ ಚಿಕಲಚಂದಾ	---ಅದೇ-----	9,735-00
18)	ಸಿದ್ದೇಶ್ವರ ದಿಂದ ಹಲಬರ್ಗಾ	---ಅದೇ-----	11,126-00
19)	ಜಾಂತಿ ರಸ್ತೆ ಸುಧಾರಣೆ ಮತ್ತು ಸಿ. ಡಿ		3,743-00
20)	ದಾಡಗಿ ದಿಂದ ರಾಜನಾಳ ರಸ್ತೆ ಸುಧಾ ಣೆ ಮತ್ತು ಸಿ. ಡಿ		56,704-00
21)	ಭಾಜೋಳಗಾ ರಸ್ತೆ ಸುಧಾರಣೆ ಮತ್ತು ಸಿ. ಡಿ		7,162-00
22)	ಭಾಡಂಬ್ರಾ ದಿಂದ ಕಾಸರತುಂಗಾವ	---ಅದೇ-----	60,174-00
23)	ಅಂಪೆಸಾಂಗಡಿ ದಿಂದ ಕೂಡ್ಲಿ	---ಅದೇ-----	11,387-00
24)	ಕರುಬಖೇಳಗಿ	---ಅದೇ-----	3,743-00
25)	ಧನ್ನುರಾ ಪಾಟಿ ದಿಂದ ಚಂದಾಪುರ	---ಅದೇ-----	3,743-00
26)	ಭಾಶಂಬ್ರಾ ದಿಂದ ಭಾಟಸಾಂಗವಿ	---ಅದೇ-----	19,560-00
27)	ಬೀರಿ (ಬಿ)	---ಅದೇ-----	3,247-00
28)	ಮೇತಿಮೆಳಕಂದಾ	---ಅದೇ-----	5,000-00
29)	ಸಾವರಗಿ ರಸ್ತೆ ಸುಧಾರಣೆ ಮತ್ತು ಸಿ. ಡಿ		5,964-00
30)	ಹಾಲಗೋಂಟಾ	---ಅದೇ-----	4,680-00
31)	ಮಾನೂರ ದಲ್ಲಿ ದರ್ಗಾ ಏಣಿಗಳು ಕಟ್ಟುವುದು		14,952-00
32)	ರುದನೂರ ದಿಂದ ಧನ್ನುರಾ ರಸ್ತೆ ಸುಧಾರಣೆ ಮತ್ತು ಸಿ. ಡಿ.		12,261-00
33)	ಖಾನಪುರ ದಿಂದ ರುದನೂರ	--ಅದೇ-----	9,420-00

34)	ನೇಳಗಿ	---ಅದೇ-----	7, 164-00
35)	ರಮಾದ ಪೂರವಾಡಿ	---ಅದೇ-----	44,003-00
36)	ಗುಂಜರಗಾ ದಿಂದ ಅಳವಾಯಿ	---ಅದೇ-----	25,953-00
37)	ಅಟ್ಟರಗಾ ದಿಂದ ಮಾಣೇಶ್ವರ	---ಅದೇ-----	5,953-00
38)	ಆಳಂವಿ ದಿಂದ ಜೋಗಾಪುರ ರಸ್ತೆ ಸುಧಾರಣೆ ಮತ್ತು ಸಿ. ಡಿ		6,830-00
39)	ಥೋಡೇಶ್ವರ ಮಂದಿರದಿಂದ ಡೊಲಾಗಾಪೂರ	---ಅದೇ-----	5,000-00
40)	ಇಡಚೂರ ದಿಂದ ಡಾದಾ ರಸ್ತೆ ಸುಧಾರಣೆ ಮತ್ತು ಸಿ. ಡಿ.		25,000-00
41)	ಚಲಸಿಗುಂಗಾವ ದಿಂದ ಚಳವಾಯಿ	---ಅದೇ-----	20,000-00
42)	ದೊಳಗಾಂವ	---ಅದೇ-----	10,000-00
43)	ಡರನಾಳ	---ಅದೇ-----	10,000-00
44)	ಮೇಲಕರ ದಿಂದ ಪಲಸಿಚುಂಗಾಂವ	---ಅದೇ-----	15,285-00
45)	ಸಾಯಂಗಾವ ದಿಂದ ಮೇಹಕರ	---ಅದೇ-----	15,000-00
46)	ಮೇಹಕರ ದಿಂದ ಅಟ್ಟರಗಾ	---ಅದೇ-----	10,000-00
47)	ಮರೂರ ಕೂಡು ರಸ್ತೆ	---ಅದೇ-----	7,237-00
48)	ಸಿದ್ದಾಪೂರವಾಡಿ ದಿಂದ ಅತನೂರ	---ಅದೇ-----	6, 159-00
		ಒಟ್ಟು	**10,05,330-00**

ಬೆಂಗಳೂರಿನ ಲೆಪ್ರಸಿ ಆಸ್ಪತ್ರೆಯನ್ನು ಸಾರ್ವಜನಿಕ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದು

750 (819) ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಲೆಪ್ರಸಿ ಆಸ್ಪತ್ರೆಯನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗುವುದೆ?

ಆ) ಹಾಗಿದ್ದಲ್ಲಿ ಈ ಆಸ್ಪತ್ರೆಯನ್ನು ಯಾವ ಕಡೆ ಸ್ಥಳಾಂತರಿಸಲಾಗುವುದು?

ಇ) ತೆರವಾಗಿರುವ ಈ ಆಸ್ಪತ್ರೆಯ ಜಾಗದಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ತೆರೆಯಲಾಗುವುದೆ?

ಈ) ಹಾಗಿದ್ದಲ್ಲಿ ಇದರ ಖರ್ಚು ವೆಚ್ಚವೆಷ್ಟು?

ಉ) ಈ ಸಾರ್ವಜನಿಕ ಆಸ್ಪತ್ರೆಯನ್ನು ಯಾವಾಗ ತೆರೆಯಲಾಗುವುದು?